**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು, ಇವರು ನಿಯಮ 330ರ ಅಡಿಯಲ್ಲಿ ನೀಡಿರುವ ಸೂಚನೆಗೆ ಹೇಳಿಕೆ**

**ಸೂಚನೆ**

"2011ನೇ ಸಾಲಿನ ಕೆ.ಎ.ಎಸ್. 362 ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸುವ ಕುರಿತು ರಾಜ್ಯ ಸರ್ಕಾರವು ಕರ್ನಾಟಕದ ಉಚ್ಛ ನ್ಯಾಯಾಲಯಕ್ಕೆ ದಿನಾಂಕ: 07.02.2017ರಂದು ವಿಧಾನ ಮಂಡಲದಲ್ಲಿ ಚರ್ಚಿಸಲಾಗಿದೆ ಎಂದು ಹೇಳಿ ದಿನಾಂಕ: 14.08.2014ರಂದು ನೇಮಕಾತಿಯನ್ನು ಹಿಂದಕ್ಕೆ ಪಡೆದಿದ್ದರಿಂದ ಕೋರ್ಟ್‌ನಲ್ಲಿ ಇವರಿಗೆ ಹಿನ್ನೆಡೆಯಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಕೆ.ಪಿ.ಎಸ್.ಸಿ ಸದಸ್ಯರ ಮೇಲಿನ ಪ್ರಕರಣಗಳೂ ನ್ಯಾಯಾಲಯದಲ್ಲಿ ರದ್ದಾಗಿರುವ ಹಿನ್ನೆಲೆಯಲ್ಲಿ ಇವರಿಗೆ ನ್ಯಾಯ ಒದಗಿಸಲು ಸದನದಲ್ಲಿ ಪ್ರಸ್ತಾಪಿಸ ಬಯಸುತ್ತೇನೆ."

---

**ಹೇಳಿಕೆ**

2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ಆಯ್ಕೆ ಪ್ರಕ್ರಿಯೆಯಲ್ಲಿ ಅವ್ಯವಹಾರಗಳ ಆರೋಪದ ಬಗ್ಗೆ ಸಿ.ಐ.ಡಿ ನೀಡಿರುವ ವರದಿ, ಮಾನ್ಯ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯ ಮತ್ತು ಕಾನೂನು ಇಲಾಖೆಯ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಆಯ್ಕೆ ಪ್ರಕ್ರಿಯೆಯನ್ನು ಜರುಗಿಸಲು ಆಯೋಗಕ್ಕೆ ಕೋರಲಾದ ಪತ್ರಗಳನ್ನು ದಿ: 14.08.2014ರಂದು ಸರ್ಕಾರಿ ಆದೇಶದಲ್ಲಿ ಹಿಂಪಡೆದುದರಿಂದ ನೇಮಕಾತಿ ಪ್ರಕ್ರಿಯೆ ಇಲ್ಲವಾಗಿದೆ.

ದಿ: 14.08.2014ರ ಸರ್ಕಾರಿ ಆದೇಶವನ್ನು ರದ್ದುಗೊಳಿಸುವಂತೆ ಕೋರಿ ಕೆಲವು ಅಭ್ಯರ್ಥಿಗಳು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ದಾಖಲಿಸಿದ್ದ ಅರ್ಜಿ ಸಂಖ್ಯೆ: 6268–6395/2014 ಮತ್ತು ಇನ್ನಿತರೆ ಅರ್ಜಿಗಳಲ್ಲಿ ಮಾನ್ಯ ನ್ಯಾಯಮಂಡಳಿಯು ನೀಡಿದ ದಿ: 19.10.2016ರ ತೀರ್ಪಿನಲ್ಲಿ ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997ರ ನಿಯಮ 11(3)ರನ್ವಯ ನೇಮಕಾತಿ ಆದೇಶ ನೀಡಲು ನಿರ್ದೇಶನ ನೀಡಿ, ದಿ: 14.08.2014ರ ಸರ್ಕಾರಿ ಆದೇಶವನ್ನು ರದ್ದುಗೊಳಿಸಿದೆ.

ಮುಂದುವರೆದು, ದಿ: 01.03.2017ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿ: 19.10.2016ರ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸದೇ ಇರಲು ನಿರ್ಣಯಿಸಲಾಯಿತು. ಈ ಹಿನ್ನೆಲೆಯಲ್ಲಿ 2011ನೇ ಸಾಲಿನಲ್ಲಿ ಆಯ್ಕೆಗೊಂಡಿರುವ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶವನ್ನು ನೀಡಲು ಸಂಬಂಧಪಟ್ಟ ಇಲಾಖೆಗಳಿಗೆ ಅನಧಿಕೃತ ಟಿಪ್ಪಣಿಯ ಮೂಲಕ ಸೂಚನೆಯನ್ನು ನೀಡಲಾಗಿತ್ತು.

ಈ ಮಧ್ಯೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿ: 19.10.2016ರ ಆದೇಶದ ವಿರುದ್ಧ ಅಪಯಶಸ್ಸು ಹೊಂದಿದ ಅಭ್ಯರ್ಥಿಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 13617–27/2017 & 14529/2017 ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಲಯವು ನೀಡಿದ ದಿ: 09.03.2018ರ ಅಂತಿಮ ತೀರ್ಪಿನಲ್ಲಿ 2011ನೇ ಸಾಲಿನ ನೇಮಕಾತಿಯಲ್ಲಿ ಭಾರಿ ಅಕ್ರಮಗಳು ನಡೆದಿರುವ ಹಿನ್ನೆಲೆಯಲ್ಲಿ ನೇಮಕಾತಿಗೆ ಸಂಬಂಧಿಸಿದಂತೆ ಹೊರಡಿಸಲಾದ ಅಧಿಸೂಚನೆ/ಅಂತಿಮ ಆಯ್ಕೆ ಪಟ್ಟಿ/ಅನಧಿಕೃತ ಟಿಪ್ಪಣಿ/ನೇಮಕಾತಿ ಆದೇಶಗಳನ್ನು ಹಾಗೂ ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ನೀಡಿರುವ ದಿ: 19.10.2016ರ ತೀರ್ಪನ್ನು ರದ್ದುಪಡಿಸಿ, ದಿ: 14.08.2014ರ ಸರ್ಕಾರಿ ಆದೇಶವನ್ನು ಎತ್ತಿಹಿಡಿದಿದೆ.

ಸದರಿ ತೀರ್ಪಿಗೆ ತಡೆಯಾಜ್ಞೆಯನ್ನು ನೀಡುವಂತೆ ಕೋರಿ ಕೆಲವು ಅಭ್ಯರ್ಥಿಗಳು ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ ಎಸ್.ಎಲ್.ಪಿ. ಸಂಖ್ಯೆ: 7166–7178/2018 ಹಾಗೂ ಅದರೊಂದಗಿನ ಇತರೆ

ಪ್ರಕರಣಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು 2011ನೇ ಸಾಲಿನ ನೇಮಕಾತಿಯ ಮುಖ್ಯ ಪರೀಕ್ಷೆಗೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಪರಿಶೀಲಿಸುವ ಬಗ್ಗೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ನಿರ್ದೇಶನ ನೀಡಿ, ಸದರಿ ಎಸ್.ಎಲ್.ಪಿ. ಪ್ರಕರಣಗಳನ್ನು ದಿ: 04.04.2018ರ ತೀರ್ಪಿನಲ್ಲಿ ವಿಲೇಗೊಳಿಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೇಲಿನ ನಿರ್ದೇಶನದಂತೆ ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 13617-27/2017 & 14529/2017ರ ಪ್ರಕರಣಗಳಲ್ಲಿ 2011ನೇ ಸಾಲಿನ ಅಭ್ಯರ್ಥಿಗಳಿಂದ ದಾಖಲಾದ **Interlocutory** ಅರ್ಜಿಗಳನ್ನು ಪರಿಶೀಲಿಸಿ, ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ ಮಾಡುವಿಕೆಗೆ ನಿರ್ದೇಶಿಸಲು ಇದು ಯೋಗ್ಯ ಪ್ರಕರಣವಲ್ಲವೆಂದು ಅಭಿಪ್ರಾಯ ನೀಡಿ, ಈ ಸಂಬಂಧವಾಗಿ ದಾಖಲಾಗಿದ್ದ ಎಲ್ಲಾ **Interlocutory** ಅರ್ಜಿಗಳನ್ನು ದಿ: 13.07.2018ರ ತೀರ್ಪಿನಲ್ಲಿ ವಜಾಗೊಳಿಸಿರುತ್ತದೆ.

ಮುಂದುವರೆದು, ಮಾನ್ಯ ಉಚ್ಚ ನ್ಯಾಯಲಯದ ದಿ: 13.07.2018ರ ತೀರ್ಪಿನ ವಿರುದ್ಧ ಸರ್ಕಾರದ ವತಿಯಿಂದಲೂ ಸಹ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ಅರ್ಜಿಯನ್ನು (ಡೈರಿ ಸಂಖ್ಯೆ: 21729/2019) ದಾಖಲಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿ: 09.08.2019ರ ತೀರ್ಪಿನಲ್ಲಿ ಸದರಿ ಎಸ್.ಎಲ್.ಪಿ. ಅರ್ಜಿಯನ್ನು ವಜಾಗೊಳಿಸಿರುತ್ತದೆ.

ಕರ್ನಾಟಕ ಲೋಕಸೇವಾ ಆಯೋಗದ ಆಯ್ಕೆ ಪಟ್ಟಿಯನ್ನು ರದ್ದುಪಡಿಸುವ/ತಿರಸ್ಕರಿಸುವ ಪ್ರಸ್ತಾವವು ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳ ಮೂಲಕ ಸಂಭವಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪುಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಎತ್ತಿಹಿಡಿದಿರುವುದರಿಂದ, ಸರ್ಕಾರಕ್ಕೆ ಲಭ್ಯವಿರುವ ಕಾನೂನಿನ ಆಸ್ಪದಗಳಾದ ಎಸ್.ಎಲ್.ಪಿ., ಮರುಪರಿಶೀಲನಾ ಅರ್ಜಿ ಸಲ್ಲಿಕೆ ಇತ್ಯಾದಿ ಅವಕಾಶಗಳು ಬರಿದಾಗಿದ್ದರಿಂದ, ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಿರುತ್ತದೆಯೇ ಹೊರತು ಸರ್ಕಾರವು ಕರ್ನಾಟಕ ಲೋಕಸೇವಾ ಆಯೋಗದ ಪ್ರಸ್ತಾವ/ಸಲಹೆಯನ್ನು ಸ್ವಯಂ ತಿರಸ್ಕರಿಸಿಲ್ಲ.

ಈ ಮೇಲೆ ವಿವರಿಸಿರುವ ಕಾರಣಗಳಿಂದ, ದಿ: 14.08.2014ರ ಸರ್ಕಾರಿ ಆದೇಶವನ್ನು ಉಚ್ಚ ನ್ಯಾಯಾಲಯವು ದಿ: 09.03.2018ರ ತೀರ್ಪಿನಲ್ಲಿ ಎತ್ತಿಹಿಡಿದಿರುವುದರಿಂದ ಹಾಗೂ 2011ನೇ ಸಾಲಿನ ಅಭ್ಯರ್ಥಿಗಳು ದಾಖಲಿಸಿದ್ದ ಎಸ್.ಎಲ್.ಪಿ. ಮತ್ತು ಮರುಪರಿಶೀಲನಾ ಅರ್ಜಿಗಳನ್ನು ಸರ್ವೋಚ್ಚ ನ್ಯಾಯಾಲಯವು ವಜಾಗೊಳಿಸಿರುವುದರಿಂದ ಹಾಗೂ ಸರ್ಕಾರದ ವತಿಯಿಂದ ದಾಖಲಿಸಿದ್ದ ಎಸ್.ಎಲ್.ಪಿ. ಅರ್ಜಿಯನ್ನೂ ಸಹ ಸರ್ವೋಚ್ಚ ನ್ಯಾಯಾಲಯವು ವಜಾಗೊಳಿಸಿರುವುದರಿಂದ, ಈ ಹಂತದಲ್ಲಿ 2011ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ಸ್ ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿದ್ದ ಅಭ್ಯರ್ಥಿಗಳ ಸಂಬಂಧ ಬೇರೆ ಯಾವುದೇ ಪರ್ಯಾಯ ಕ್ರಮದ ಸಾಧ್ಯತೆಗಳಿರುವುದಿಲ್ಲ.

ಬಿ.ಎಸ್. ಯಡಿಯೂರಪ್ಪ

**ಕಡತ ಸಂಖ್ಯೆ: ಸಿಆಸುಇ 08 ಎಸ್‌ಎಸ್‌ಸಿ 2020**

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ